ಸಿ.ಸಿ.392/2023 ಪಿಡಬ್ಲ್ಯು-1

ದಿನಾಂಕಃ 01.07.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದಃ**

ನಾನು ಕಿತ್ತಳೆಗಂಡಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಳೆದ 16 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಆರೋಪಿ ಮೂಡಿಗೆರೆ ತಾಲ್ಲೂಕಿನ ಕೃಷ್ಣಾಪುರದ ಶಾಂತಿನಗರದ ನಿವಾಸಿ. ಈ ಬಗ್ಗೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ನನಗೆ ತಿಂಗಳಿಗೆ 60 ಸಾವಿರ ಸಂಬಳ ಬರುತ್ತದೆ. ನಾನು ಮೂಡಿಗೆರೆಯ ಕೆನರಾ ಬ್ಯಾಂಕಿನಲ್ಲಿ ಮಾತ್ರ ಖಾತೆ ಹೊಂದಿದ್ದೇನೆ. ದಿ.01.01.2023 ರಿಂದ 01.05.2023 ರ ವರೆಗಿನ ನನ್ನ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಬಲ್ಲೇ. ನಾನು ಬ್ಯಾಂಕಿನ ಮೂಖಾಂತರ ಹಾಗೂ Googelpay ಮತ್ತು phone pay ಮೂಲಕ ವ್ಯವಹಾರಗಳನ್ನು ಮಾಡುತ್ತೇನೆ. ನನಗೆ ಚೆಕ್ ವ್ಯವಹಾರದ ಮಾಹಿತಿ ಸ್ವಲ್ಪ ಮಟ್ಟಿಗೆ ಇದೆ.

ಆರೋಪಿ ನನ್ನ ಬಳಿ ಹಣ ಕೇಳಿದ್ದರು ಎನ್ನಲಾದ ದಿ.15.11.2022. ಈ ಬಗ್ಗೆ ನೋಟಿಸು ಮತ್ತು ಪಿರ್ಯಾದಿಯಲ್ಲಿ ತಿಳಿಸಿಲ್ಲ. ಆರೋಪಿ ಯಾವ ವ್ಯವಹಾರ ಮಾಡುತ್ತಾರೆ ಎಂದು ನೋಟಿಸು ಮತ್ತು ಪಿರ್ಯಾದಿನಲ್ಲಿ ತಿಳಿಸಿಲ್ಲ. ಆದರೆ ಆ ವಿಷಯ ನನಗೆ ಗೊತ್ತಿದೆ. ಯಾವ ವಿಚಾರಕ್ಕೆ ಆರೋಪಿ ನನ್ನ ಬಳಿ ಹಣ ಕೇಳಿದ್ದರೂ ಎಂದು ನೋಟಿಸು ಮತ್ತು ಪಿರ್ಯಾದಿನಲ್ಲಿ ಬರೆಸಿಲ್ಲ. ನಿಪಿ-1 ರಲ್ಲಿ ಇರುವ ಸಹಿ ಮತ್ತು ಬರವಣಿಗೆಯ ಶಾಹಿಗಳು ಬೇರೆ ಬೇರೆ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ಆರೋಪಿ ನನ್ನ ಮನೆಯಲ್ಲಿಯೇ ಹಣ ಕೇಳಿದ್ದರು. ಆ ಸಮಯದಲ್ಲಿ ನನ್ನ ಪತಿ ಮತ್ತು ಮಕ್ಕಳು ಇದ್ದರು. ಆಗ ಸಮಯ ಮದ್ಯಾಹ್ನ 2 ರಿಂದ 3 ಗಂಟೆಯಾಗಿತ್ತು. ನಾನು ನನ್ನ ಪರಿಚಯಸ್ಥರೊಂದಿಗೆ ಬಡ್ಡಿ ವ್ಯವಹಾರ ಮಾಡುವುದಿಲ್ಲ. ನಾನು ಹೇಳಿದ ದಿನಾಂಕದಂದು ಆರೋಪಿ ಒಬ್ಬರೆ ಬಂದಿದ್ದರು. ಹಣ ಕೇಳಿದ ಎಷ್ಟು ದಿನಗಳ ನಂತರ ನೀವು ಆರೋಪಿಗೆ ನೋಟಿಸು ನೀಡಿದ್ದೀರಿ ಎನ್ನುವ ಪ್ರಶ್ನೆಗ ಸಾಕ್ಷಿಯು ನಾನು ದಿ.17.01.2023 ರಂದು ಚೆಕ್ ಹಾಜರುಪಡಿಸಿದ್ದು ಅದು ದಿನಾಂಕ.18.01.2023 ರಂದು ವಾಪಾಸ್ಸಾಗಿದ್ದು, ದಿ.30.01.2023 ರಂದು ನನ್ನ ವಕೀಲರಿಗೆ ಬೇಟಿ ಮಾಡಿ, ವಿಚಾರವನ್ನು ತಿಳಿಸಿದ್ದು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯು ತಮ್ಮ ಕೈ ಮೇಲೆ ದಿನಾಂಕಗಳಂದು ಬರೆದುಕೊಂಡು ಬಂದಿದ್ದಾರೆ ಎಂದು ಹೇಳಿದ್ದು ಈ ಬಗ್ಗೆ ಪರಿಶೀಲಿಸಿದಾಗ ಸಾಕ್ಷಿಯು ತಮ್ಮ ಕೈಯ ಮೇಲೆ ನಿಪಿ-1 ರ ಚೆಕ್ಕಿನ ಸಂಖ್ಯೆ, 17.01., 18.01., ಮತ್ತು 31.01., ಎಂದು ಬರೆದುಕೊಂಡಿರುತ್ತಾರೆ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.